### ಜೋಸೆಫ್ ಎಂದೋ ಚರ್ಚಿನ ಪಾದ್ರಿಯೆದುರು ಪಾಪನಿವೇದನೆ ಮಾಡಿಕೊಂಡಂತೆ, ಈಗ ಯಾವುದೋ ತಡೆಯಲಾರದ ಒತ್ತಡ, ದುಗುಡಗಳಿಂದ ಇದನ್ನೆಲ್ಲ ನಮ್ಮೆದುರು ಹೇಳಿಕೊಂಡು ಹಗುರಾಗುತ್ತಿರಬಹುದು ಎಂದು ರಾಮೇಗೌಡನಿಗೆ ಅನ್ನಿಸಿತು.



ಆಗಬಹುದೇನೋ ಎಂಬ ಹುತಾತ್ಮತನದ ಒಳಾಸೆಯೂ ಇದರಲ್ಲಿ ಸೇರಿಕೊಂಡಿತ್ತೇನೋ! ಅಷ್ಟೊತ್ತಿಗೆ ಹನುಮಂತರಾಯರು ಎಡೆಬಿಡದೆ ಕೋರ್ಟಿನಲ್ಲಿ ವಾದ ಮಾಡಿ ಮೇಷ್ಟರನ್ನು ಖುಲಾಸೆ ಮಾಡಿಸಿಕೊಂಡು ಬಂದರು. ಮೇಷ್ಟರ ಜೈಲು ಡೈರಿಯನ್ನು ಆಧರಿಸಿದ ನನ್ನ ನಿರೂಪಣೆಯ ಕೊನೆಯ ಕಂತು ಅದರೊಂದಿಗೆ ಮುಗಿಯಿತು.

ಈ ಅನುಭವ ಕಥನವನ್ನು ವಾರವಾರ ಓದುತ್ತಿದ್ದ ಗೆಳೆಯರು 'ಈ ರಿಯಲ್ ಸ್ಟೋರಿ ಬಹುಮಾನ ಪಡೆದ ನಿನ್ನ ಸ್ಟೋರಿಗಿಂತ ಚೆನ್ನಾಗಿದೆ' ಎಂದಾಗಲೆಲ್ಲ ಅವರು ಅದನ್ನು ಮೆಚ್ಚುತ್ತಿದ್ದಾರೋ ಕಾಲೆಳೆಯುತ್ತಿದ್ದಾರೋ ಎಂಬ ಅನುಮಾನ ಇದ್ದೇ ಇತ್ತು! ಈ ನಡುವೆ ನಿಷ್ಠುರ ವಿಮರ್ಶಕ ಪ್ರೊ. ನಾಗರಾಜ್ ಬೇರೆ ಒಂದು ಸಂಜೆ, 'ವಾಟ್ ಮಿಸ್ಟರ್ ಜೋಸೆಫ್! ನೀವು ಬರೀತಿರೋ 'ನೈಜ' ಅನುಭವ ಕಥನ ಒಳ್ಳೆ ಫಿಕ್ಷನ್ ಥರಾ ಇದೆಯಲ್ರೀ!' ಎಂದು ಯಾರೂ ಅರಿಯದ ಗುಟ್ಟೊಂದನ್ನು ಭೇದಿಸಿದವರಂತೆ ತಮ್ಮ ಪೊದೆಗಡ್ಡದ ನಡುವೆ ಚೂಪಾಗಿ ಕಾಣುತ್ತಿದ್ದ ಕಣ್ಣನ್ನು ನನ್ನ ಮೇಲೆ ನೆಟ್ಟು ಕೆಣಕಿದ್ದರು. ಚಣ ಬಿಟ್ಟು, 'ಈ ಥರಾ ರೈಟಿಂಗ್ ಮಾಡೋದು ಇಮ್ಮಾರಲ್ ಅಲ್ಲವೇನ್ರೀ ಸಾಹೇಬ್ರೇ?' ಎಂದು ಗೊಣಗುತ್ತಾ ನನ್ನನ್ನು ತಿವಿದಿದ್ದರು. ತಕ್ಷಣ ನನ್ನ ಮುಖ ಚಿಕ್ಕದಾಗಿದ್ದು ಕಂಡು ಏನನ್ನಿಸಿತೋ ಏನೋ, ಅವರೇ ಮಾತು ಬದಲಿಸಿ ಸುಮ್ಮನಾಗಿದ್ದರು.

ಆದರೆ ಪ್ರೊ. ನಾಗರಾಜ್ ಆಡಿದ್ದ ಮಾತಿನ ಸತ್ಯ ನಿಧಾನಕ್ಕೆ ನನ್ನನ್ನು ಕುಟುಕತೊಡಗಿತು. ಮೇಷ್ಟರ ಡೈರಿಯ ವಿವರಗಳನ್ನು ಜೋಡಿಸಿದ ಕ್ರಮದಲ್ಲೇ, ಅದನ್ನು ಲಿರಿಕಲ್ ಆದ ನಿರೂಪಣಾ ವರದಿಯಂತೆ ಕತೆ ಮಾಡಿ ಬರೆದಿದ್ದರಲ್ಲೇ ಹುಸಿತನವಿತ್ತಲ್ಲವೆ? ಮೇಷ್ಟರ ಮುಗ್ಧತೆಯನ್ನು 'ಪ್ರೂವ್' ಮಾಡುವಂತೆ ಬರವಣಿಗೆಯನ್ನು ಬಳಸಿದ್ದು ಅನೈತಿಕವಲ್ಲವೆ? ಈ ಪ್ರಶ್ನೆಗಳು ಆಗಿನಿಂದಲೂ ಸುಳಿಯುತ್ತಲೇ ಇವೆ. ಹಾಗೇ ಬರಬರುತ್ತಾ ಬಹುಮಾನ ಪಡೆದ ನನ್ನ 'ಹುಲಿ ಮತ್ತು ಪಾರಿವಾಳ' ಕತೆಯಲ್ಲೂ ಇಂಥ ಹುಸಿತನಗಳಿರಬಹುದಲ್ಲವೆ ಅಂತ ನನಗೆ ಅನುಮಾನ ಶುರುವಾಯಿತು.

ತನ್ನನ್ನೇ ತಾನು ಟೀಕಿಸಿಕೊಳ್ಳುತ್ತಿದ್ದ ಈ ಭಾಗವನ್ನು ಓದಲು ಕೊಂಚ ಇರಿಸುಮುರಿಸಾದಂತಾಗಿ ಅಲ್ಲಿಗೇ ನಿಲ್ಲಿಸಿದ ಜೋಸೆಫ್ ಕತ್ತೆತ್ತಿ ಮಿತ್ರರಿಬ್ಬರ ಮುಖ ನೋಡಿದ. ಎದುರಿಗೆ ಕೂತಿದ್ದ ಕತೆಗಾರ ಮಿತ್ರರಿಬ್ಬರೂ ಜೋಸೆಫ್ ಇದನ್ನೆಲ್ಲ ಈಗ ಯಾಕೆ ಬರೆದು ತಮಗೆ ಒಪ್ಪಿಸುತ್ತಿದ್ದಾನೆಂಬ ಪ್ರಶ್ನೆಯನ್ನು ಆಗಾಗ್ಗೆ ತಮ್ಮ ಹಣೆಯ ನಿರಿಗೆ, ಹುಬ್ಬುಗಂಟುಗಳಲ್ಲೇ ಸೂಚಿಸುತ್ತಿದ್ದವರು, ಇದೀಗ ಜೋಸೆಫ್, 'ಬಹುಮಾನ ಪಡೆದ ನನ್ನ 'ಹುಲಿ ಮತ್ತು ಪಾರಿವಾಳ' ಕತೆಯಲ್ಲೂ ಇಂಥ ಹುಸಿತನಗಳಿರಬಹುದಲ್ಲವೆ' ಎಂಬ ತೀರಾ ಕಾಂಪ್ಲಿಕೇಟೆಡ್ ಪ್ರಶ್ನೆಗೆ ಬಂದು ಇದ್ದಕ್ಕಿದ್ದಂತೆ ನಿಲ್ಲಿಸಿದಾಗ 'ಆಂ' ಎಂದು ಬಾಯ್ಬಿಟ್ಟರು. ಅದರಲ್ಲೂ ಇವತ್ತು ಜೋಸೆಫ್ ಇದನ್ನೆಲ್ಲ ಓದಲು ಶುರು ಮಾಡುವ ಮೊದಲೇ, 'ಅದೊಂದೇ ನೀನು ಹಾನೆಸ್ಟಾಗಿ ಬರೆದಿರೋ ಕತೆ!' ಎಂದು ಕುಟುಕುತ್ತಾ ನಕ್ಕಿದ್ದ ರಾಮೇಗೌಡನಂತೂ ಆಗ ತನ್ನ ಹೇಳಿದ್ದನ್ನು ಸಮರ್ಥಿಸಿಕೊಳ್ಳಬೇಕೋ, ಜೋಸೆಫ್ ಹೇಳುತ್ತಿರುವುದನ್ನು ಒಪ್ಪಿಕೊಳ್ಳಬೇಕೋ ಬಗೆಹರಿಯದೆ ಕಣ್ ಕಣ್ ಬಿಟ್ಟ. ಜೋಸೆಫ್ ಎಂದೋ ಚರ್ಚಿನ ಪಾದ್ರಿಯೆದುರು ಪಾಪನಿವೇದನೆ ಮಾಡಿಕೊಂಡಂತೆ, ಈಗ ಯಾವುದೋ ತಡೆಯಲಾರದ ಒತ್ತಡ, ದುಗುಡಗಳಿಂದ ಇದನ್ನೆಲ್ಲ ನಮ್ಮೆದುರು ಹೇಳಿಕೊಂಡು ಹಗುರಾಗುತ್ತಿರಬಹುದು ಎಂದು ಕೂಡ ರಾಮೇಗೌಡನಿಗೆ ಅನ್ನಿಸಿತು. ಜೋಸೆಫ್ ಹೇಳುವುದನ್ನೆಲ್ಲ ಹೇಳಿಬಿಡಲಿ ಅಲ್ಲವೇ ಎಂದು ರಾಮೇಗೌಡ ಪಕ್ಕದಲ್ಲಿದ್ದ ಕತೆಗಾರ ಹಮೀದುವನ್ನು ಕಣ್ಣು–ಮುಖದಲ್ಲೇ ಕೇಳಿದ; ಹಮೀದು ಹೂಂ ಎನ್ನುವಂತೆ ಕತ್ತು ಹಾಕಿದ ಮೇಲೆ, ಅದನ್ನೇ ಕೈ ಸನ್ನೆಯ ಮೂಲಕ ಜೋಸೆಫ್ ಗೂ ಸೂಚಿಸಿದ. ಜೋಸೆಫ್ ನೀರು ಕುಡಿದು ಸುಧಾರಿಸಿಕೊಂಡು ಉಳಿದ ಪೇಜುಗಳನ್ನು ಕೈಗೆತ್ತಿಕೊಳ್ಳುತ್ತಾ ಮತ್ತೆ ಓದಲು ಶುರು ಮಾಡಿದ:

ಇಷ್ಟೇ ಆಗಿದ್ದರೆ ಹಾಳಾಗಿ ಹೋಗಲಿ, ಅದೊಂದು ಡಿಸಾನೆಸ್ಟ್ ಕತೆ, ನಾವು ನಿತ್ಯ ಮಾಡುವ ಅನೇಕ ಅಪ್ರಾಮಾಣಿಕ ಕೆಲಸದಲ್ಲಿ ಇದೂ ಒಂದು ಎಂದು ಸುಮ್ಮನಾಗಬಹುದಿತ್ತು. ಆದರೆ ಇದೆಲ್ಲ ಆಗಿ ಎಷ್ಟೋ ವರ್ಷಗಳಾದ ಮೇಲೆ ಕವಿ ರಮೇಶ್ ನಡುಹಳ್ಳಿ ಒಂದು ಸಂಜೆ ಬಿಯರ್ ಕುಡಿಯುತ್ತಾ, 'ನಿನಗೆ ಈ ವಿಷಯ ಗೊತ್ತಿರಲಿಕ್ಕಿಲ್ಲ; ಎಷ್ಟೋ ವರ್ಷದ ಕೆಳಗೆ ನಿನ್ನ 'ಹುಲಿ ಮತ್ತು ಪಾರಿವಾಳ' ಅನ್ನೋ ಕತೆಗೆ ಪ್ರೈಝ್ ಬಂತಲ್ಲ, ಆ ಕತೆಯ ಧೋರಣೆ, ಐಡಿಯಾಲಜಿ ಇವನ್ನೆಲ್ಲ ಕಟುವಾಗಿ ಟೀಕಿಸಿ ಲೇಖನ ಬರೆಯಬೇಕೆಂದು ನನಗೆ ಪಾರ್ಟಿಯಿಂದ ಅಸೈನ್‌ಮೆಂಟ್ ಇತ್ತು' ಎನ್ನುತ್ತಾ ಅದೊಂದು ಆ ಕಾಲದ ತಮಾಷೆಯ ಸಂಗತಿಯೆಂಬಂತೆ ನಕ್ಕ. ಆ ಅಸೈನ್‌ಮೆಂಟ್ ಬಂದಾಗ ರಮೇಶ್ ಇನ್ನೂ ರೆವಲ್ಯೂಷನರಿ ಪಾರ್ಟಿಯ ಸಿಂಪಥೈಸರ್ ಆಗಿದ್ದ. ಅವನ ಮಾತು ಕೇಳಿ ವಿಸ್ಮಯಗೊಂಡ ನಾನು ನಕ್ಕು ಸುಮ್ಮನಾದರೂ, ಗಳಿಗೆಯ ನಂತರ ಅವನು ಹೇಳಿದ್ದರ ಬಗೆಗೇ ಯೋಚಿಸುತ್ತಿರುವಾಗ ಒಂದು ಕತೆ ಎಲ್ಲಿಂದ ಎಲ್ಲಿಗೋ ತೆಗದುಕೊಂಡು ಹೋಗುತ್ತಲ್ಲ ಅನ್ನಿಸಿ ಅಚ್ಚರಿಯಾಯಿತು, ಭಯವೂ ಶುರುವಾಯಿತು. ಸತ್ಯ ಏನು ಎಂಬುದನ್ನು ನನ್ನ ಕುತ್ತಿಗೆ ಪಟ್ಟಿಯನ್ನು ನಾನೇ ಹಿಡಿದು ಕೇಳಿಕೊಳ್ಳದೆ, ನಾನು ಕತೆ ಬರೆಯುತ್ತಿರುವ ಕ್ರಾಂತಿಕಾರಿಗಳ ಲೋಕದ ಆಳ ಅಗಲಗಳೇ ಗೊತ್ತಿಲ್ಲದೆ, ಕತೆಯ ಪಾತ್ರಗಳ ಪರಕಾಯ ಪ್ರವೇಶವನ್ನೇ ಮಾಡದೆ, ಪಾತ್ರಗಳ ಮನಸ್ಥಿತಿಯನ್ನು ಅರಿಯುವ ಪ್ರಯತ್ನವನ್ನೇ ಮಾಡದೆ ಸುಮ್ಮನೆ ಎಫೆಕ್ಟಿಗಾಗಿ ಕತೆ ಬರೆಯಲು ಹೋಗಿದ್ದು ಎಡವಟ್ಟಾಯಿತು; ಮನೆ ಬಿಟ್ಟು, ಅಪ್ಪ ಅಮ್ಮ ತಂಗಿ ಎಲ್ಲರನ್ನೂ ಬಿಟ್ಟು, ಜೀವದ ಹಂಗು ಬಿಟ್ಟು, ಊರೂರು ಸುತ್ತುತ್ತಾ, ಜನರನ್ನು ಆರ್ಗನೈಸ್ ಮಾಡುತ್ತಾ ಸೀರಿಯಸ್ಸಾಗಿ ಹೋರಾಟ ಮಾಡುತ್ತಿದ್ದ ಕವಿಯೊಬ್ಬನಿಗೆ, ಆ ಕವಿಯಂಥ ಹತ್ತಾರು ತರುಣರಿಗೆ ನನ್ನ ಕತೆ ಭಯಂಕರವಾದ ಅನ್ಯಾಯ ಮಾಡಿಬಿಟ್ಟಿದೆ ಎನ್ನಿಸಿತು. ನನ್ನ ಬಗ್ಗೆ